ಬಾಗಲಕೋಟೆ ಜಿಲ್ಲೆಯ ಕೇಸನೂರ ಗ್ರಾಮದ ಸೋಮು ರೆಡ್ಡಿ ರಾಜ್ಯಶಾಸ್ತ್ರ ಮತ್ತು ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವೀಧರರು. ಸಾಹಿತ್ಯದೊಂದಿಗೆ ರಂಗಭೂಮಿ, ಸಿನಿಮಾ ಕ್ಷೇತ್ರದಲ್ಲೂ ಆಸಕ್ತರು. ಪ್ರಸ್ತುತ ಹುಬ್ಬಳ್ಳಿಯಲ್ಲಿ ನೆಲೆ, ಪೊಲೀಸ್ ಇಲಾಖೆಯಲ್ಲಿ ಕಾರ್ಯನಿರ್ವಹಣೆ.

ಉಡುಗೊರೆಗಳನ್ನು ವಿನಿಮಯಿಸುವುದು, ಆಗಾಗ ಬಂದು ಒಂದೆರೆಡು ದಿನ ಇದ್ದು ಉಂಡು- ತಿಂದು ಹೋಗುವುದು, ಆಗಾಗ ಫೋನಾಯಿಸಿ ಕುಶಾಲು ಕೇಳುವುದು- ಇಂಥ ಅನ್ಯೋನ್ಯತೆಯು ನಾಲ್ಕಾರು ತಿಂಗಳು ಸಾಂಗ್ಯವಾಗಿಯೇ ಸಾಗಿತ್ತು. ಬರಬರುತ್ತಾ ಸತೀಶ ಮತ್ತು ಆತನ ಮನೆಯವರು ಅದ್ಯಾಕೋ ಇಂಥದ್ದನ್ನೆಲ್ಲಾ ಅಕಾರಣವಾಗಿ ಕಡಿಮೆ ಮಾಡಿದರು. ಅದರ ಹಿಂದಿನ ಅಸಲಿಯತ್ತು ಸಂಕಪ್ಪನಿಗಾಗಲಿ, ರುಕ್ಮವ್ವಳಿಗಾಗಲಿ ತಿಳಿಯಲಿಲ್ಲ. ಯಶೋದಾಳೂ ಈ ಕುರಿತಾಗಿ ತುಟಿ ಬಿಚ್ಚಿರಲಿಲ್ಲ. ಆಕೆ ಒಮ್ಮೆ ಏಕಾಏಕಿ ಹಬ್ಬದ ನೆಪಮಾಡಿ ತವರು ಸೇರಿದವಳು ಹದಿನೈದು ದಿನ, ಇಪ್ಪತ್ತು ದಿನ, ಕೊನೆಗೆ ತಿಂಗಳು ಗತಿಸಿದರೂ ಆಕೆ ಗಂಡನ ಮನೆಗೆ ಹೋಗುವ ಸುದ್ದಿಯೇ ಎತ್ತಲಿಲ್ಲ. ಕನಿಷ್ಠ ಪಕ್ಷ ಹೀಗೀಗೆ ಅಂತ ಕಾರಣವನ್ನೂ ತಿಳಿಸಲಿಲ್ಲ. ಇದರಿಂದ ಸಂಕಪ್ಪ ಮತ್ತು ರುಕ್ಮವ್ವ- ಇಬ್ಬರಿಗೂ ಒಂಥರಾ ಗಾಬರಿ, ಸಂಕಟ ಒಟ್ಟೊಟ್ಟಿಗೆ ಅಂಟಿಕೊಂಡಿತು.

ಅಸಲಿಗೆ ಮಗಳ ಈ ರೀತಿಯ ವರ್ತನೆಯ ಹಿಂದೆ ಬೇರೇನೋ ಕಹಾನಿ ಇದ್ದಿರಬಹುದೆಂದು ಅರ್ಥೈಸಿಕೊಂಡ ಸಂಕಪ್ಪ ಸೀದಾಸೀದಾ ಸತೀಶನಿಗೆ ಫೋನಾಯಿಸಿದ. ಅವನು ಎಂದಿನಂತೆ ಸಭ್ಯತೆಯಿಂದ, ಗೌರವದಿಂದ, ಅಷ್ಟೇ ಗಳಿಬಿಳಿಯಿಂದ ಮಾತಾಡಿದ್ದರಿಂದ ಯಶೋದಾ ಮತ್ತು ಅವನ ನಡುವಿನ ದಾಂಪತ್ಯಕ ಸಮಸ್ಯೆಯ ಯಾವ ವಾಸನೆಯೂ ಸಂಕಪ್ಪನಿಗೆ ತಾಗಲಿಲ್ಲ. ಇದಾಗ್ಯೂ ಸತೀಶ ಆವಾಗಿನಿಂದ ವಾರಕ್ಕೊಮ್ಮೆ, ಹದಿನೈದು ದಿನಕ್ಕೊಮ್ಮೆ ಯಶೋದಾಳ ಬಳಿ ಬಂದುಹೋಗುವುದನ್ನ ಸುರು ಮಾಡಿದ್ದರಿಂದ ಸಂಕಪ್ಪನಿಗೆ ಮತ್ತೇನೂ ಮಾಡಬೇಕಾದ ಪ್ರಮೇಯವೇ ಉಂಟಾಗಲಿಲ್ಲ. ಸತೀಶ ಹೀಗೆ ಬಂದು ಹೋಗುವುದನ್ನೇನೋ ರೂಢಿ ಮಾಡಿಕೊಂಡ. ಆದರೆ ಯಶೋದಾಳನ್ನ ಮಾತ್ರ ತನ್ನ ಮನೆಗೆ ಕರೆದೊಯ್ಯಲು ತಯಾರಿರಲಿಲ್ಲ. ಪ್ರತಿಸಲ ಬಂದಾಗಲೂ ಆಕೆಯೊಂದಿಗೆ ಸಣ್ಣಪುಟ್ಟ ವಿಷಯಕ್ಕೆ ಕಾದಾಡಿ ಸೆಟಗೊಂಡು ಹೋಗತೊಡಗಿದ್ದ. ಯಶೋದಾಳೂ ಅಷ್ಟೇ. ಉಳಿದ ದಿನಗಳಲ್ಲೆಲ್ಲಾ ನಕ್ಕೋತ ಚದ್ದಂಗ ಇರುತ್ತಿದ್ದಂತವಳು ಅವನು ಬಂದಾಗ ಮಾರಿ ಸಿಂಡರಿಸಿಗೊಂಡು ದುಮುದುಮು ಉರಿಯುತ್ತಿದ್ದಳು. ಯಾರೊಂದಿಗೂ ನೆಟ್ಟಗೆ ಮಾತಾಡದೇ ಮೂಕ ಬಸವಣ್ಣನಂತೆ ಹೊತ್ತುಗಳೆಯುತ್ತಿದ್ದಳು. ತಾಳು ಮೇಳಿಲ್ಲದ ಇವರಿಬ್ಬರ ಈ ಹಂಡಬಂಡ ಸಂಸಾರವನ್ನು ಸರಿಪಡಿಸಬೇಕೆಂದು ರುಕ್ಮವ್ವ, ಸಂಕಪ್ಪರಿಬ್ಬರೂ ಅಕಲು ಹಾಕಿ ಒಮ್ಮೆ ಅತ್ತುಕರೆದು, ಆಣೆ ಪ್ರಮಾಣವನ್ನೆಲ್ಲಾ ಮಾಡಿಸಿಕೊಂಡು, ಯಶೋದಾಳಿಂದ ಕಾರಣವನ್ನು ಬಾಯಿ ಬಿಡಿಸಿಯೇಬಿಟ್ಟರು.

ಸದ್ಯ ಸತೀಶ ಇಪ್ಪತ್ತು ಸಾವಿರ ಪಗಾರಕ್ಕೆ ಬ್ಯಾಂಕಿನಲ್ಲಿ ದುಡಿಯುತ್ತಿದ್ದ. ಆ ಬ್ಯಾಂಕಿನ ನಿಯಮದಂತೆ ಅವನು ಆರು ಲಕ್ಷ ದುಡ್ಡನ್ನ ಆ ಬ್ಯಾಂಕಿನಲ್ಲಿ ಡೆಪಾಸಿಟ್ ಮಾಡಬೇಕಿತ್ತು. ಅಂದಾಗ ಮಾತ್ರ ಅವನ ನೌಕರಿ ಕಾಯಂ ಆಗುತ್ತಿತ್ತು. ಕಡಿಮೆ ಅಂದರೂ ನಲವತ್ತೈವತ್ತು ಸಾವಿರ ರೂಗಳ ಪಗಾರ, ಕಡಿಮೆ ಬಡ್ಡಿ ದರದಲ್ಲಿ ವೈಯಕ್ತಿಕ ಸಾಲ, ಗೃಹ ವಸತಿ, ಆಸ್ಪತ್ರೆ, ಬಡ್ತಿ, ಪಿಂಚಣಿ- ಇಂಥ ಎಲ್ಲ ಸೌಲಭ್ಯವೂ ಸಿಗುತ್ತಿತ್ತು. ಈ ಕಾರಣಕ್ಕಾಗಿ ಸತೀಶ ರೊಕ್ಕ ಹೊಂದಿಸಲಾಗದೇ ಸುಮಾರು ತಿಂಗಳಿಂದ ತೊಳಲಾಡುತ್ತಿದ್ದ. ಅವನ ಮನೆಯ ಪರಿಸ್ಥಿತಿಯೂ ಸರಿಯಿರದಿದ್ದರಿಂದ ಹೇಗಾದರೂ ಮಾಡಿ ಆ ಹಣವನ್ನ ಸಂಕಪ್ಪನಿಂದ ಇಸಿದುಕೊಳ್ಳಬೇಕೆಂದು ಯಶೋದಾಳಿಗೆ ಪೀಡಿಸುತ್ತಲೇ ಬಂದಿದ್ದ. ತನ್ನ ನೌಕರಿ ಕಾಯಂ ಆದರೆ ಸಂಕಪ್ಪ, ರುಕ್ಮವ್ವ, ಮಂಜನನ್ನ ಸ್ವತಃ ತಾನೇ ನೋಡಿಕೊಳ್ಳುವುದಾಗಿಯೂ ಪುಸಲಾಯಿಸಿದ್ದ. ಆದರೂ ಅವನ ಯಾವ ಕಸರತ್ತಿಗೂ ಯಶೋದಾ ಜಗ್ಗಿರಲಿಲ್ಲ. ಹೀಗಾದಾಗ ಆಕೆಗೆ ಹಂತಹಂತವಾಗಿ